ಕರ್ನಾಟಕ ಸರ್ಕಾರ

ಅಕ್ಟೋಬರ್ 11, 2017

## ಭೂಪಸಂದ್ರದ ಜಮೀನು ಡಿ–ನೋಟಿಫಿಕೇಶನ್ ಕುರಿತ ಬಿ ಜೆ ಪುಟ್ಟಸ್ವಾಮಿ ಆರೋಪ ಶುದ್ಧ ಸುಳ್ಳು, ಆಧಾರ–ರಹಿತ, ಕ್ಷುಲ್ಲಕ ಹಾಗೂ ರಾಜಕೀಯ ಪ್ರೇರಿತ : ಸಿದ್ದರಾಮಯ್ಯ

ಬೆಂಗಳೂರು, ಅಕ್ಟೋಬರ್ 11,:

ಬೆಂಗಳೂರು ನಗರದ ಭೂಪಸಂದ್ರದಲ್ಲಿ ಜಮೀನು ಡಿ–ನೋಟಿಫಿಕೇಶನ್ ಮಾಡಲಾಗಿದೆ ಎಂಬ ಭಾರತೀಯ ಜನತಾ ಪಕ್ಷದ ನಾಯಕ ಹಾಗೂ ರಾಜ್ಯ ವಿಧಾನ ಪರಿಷತ್ ಸದಸ್ಯ ಬಿ ಜೆ ಪುಟ್ಟಸ್ವಾಮಿ ಅವರ ಆರೋಪ ಶುದ್ಧ ಸುಳ್ಳು, ಆಧಾರ–ರಹಿತ, ಕ್ಷುಲ್ಲಕ ಹಾಗೂ ರಾಜಕೀಯ ಪ್ರೇರಿತ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಸಂಜೆ ಕರೆದ ತುರ್ತು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

ಬಿ ಜೆ ಪುಟ್ಟಸ್ವಾಮಿ ಅವರ ಆರೋಪಗಳನ್ನು ಸಾಬೀತು ಪಡಿಸುವಂತಹ ಯಾವುದೇ ದಾಸ್ತಾವೇಜುಗಳು ಮಾತ್ರವಲ್ಲ, ಒಂದು ಕಾಗದದ ತುಂಡೂ ಕೂಡಾ ಇಲ್ಲ ಎಂದು ಸ್ಪಷ್ಟಪಡಿಸಿದ ಸಿದ್ದರಾಮಯ್ಯ ಅವರು ಕೇವಲ ರಾಜಕೀಯ ಲಾಭ ಗಳಿಕೆಯ ದೃಷ್ಟಿಯಿಂದ ಮಾಡುತ್ತಿರುವ ಇಂತಹ ಆರೋಪಗಳಲ್ಲಿ ಹುರುಳಿಲ್ಲ ಎಂದರು.

### ಡಿ–ನೋಟಿಫಿಕೇಶನ್ ಮಾಡುವುದು ಹೇಗೆ ?

ಡಿ–ನೋಟಿಫಿಕೇಶನ್ ಮಾಡುವುದು ಅಪರಾಧವೇನಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಡಿ–ನೋಟಿಫಿಕೇಶನ್ ಮಾಡಲು ಕಾನೂನಿನಲ್ಲಿ ಅವಕಾಶವಿದೆ. ಆದರೆ, ಅದಕ್ಕೂ ಒಂದು ಕ್ರಮವಿದೆ. ಡಿ–ನೋಟಿಫಿಕೇಶನ್ ಮಾಡಬೇಕಾದರೆ, ಭೂ–ಸ್ವಾಧೀನ ಕಾಯಿದೆ 1894 ರ ಪರಿಚ್ಛೇಧ 48 (1) ರಂತೆ ತೀರ್ಮಾನ ಕೈಗೊಳ್ಳದಿದ್ದಲ್ಲಿ ಹಾಗೂ ದಿವಾಣಿ ನ್ಯಾಯಾಲಯದಲ್ಲಿ ಪರಿಹಾರವನ್ನು ಠೇವಣಿ ಇರಿಸದಿದ್ದಲ್ಲಿ ವಶಕ್ಕೆ ಪಡೆಯದ ಜಮೀನುಗಳನ್ನು ಡಿ–ನೋಟಿಫಿಕೇಶನ್ ಮಾಡಬಹುದು.

ಸರ್ಕಾರದ ಕಂದಾಯ, ಕಾನೂನು, ಜಮೀನಿಗೆ ಸಂಬಂಧಿತ ಇಲಾಖೆ – ನಗರಾಭಿವೃದ್ಧಿ ಅಥವಾ ಪೌರಾಡಳಿತ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಥವಾ ಭೂ–ಸ್ವಾಧೀನ ಪ್ರಕ್ರಿಯೆ ಸಂಸ್ಥೆಯ ಆಯುಕ್ತರು, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಅಥವಾ ವ್ಯವಸ್ಥಾಪಕ ನಿರ್ದೇಶಕರನ್ನು ಒಳಗೊಂಡ ರಾಜ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದ ಸಮಿತಿಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವೂ ಸೇರಿದಂತೆ ವಿವಿಧ ಪ್ರಾಧಿಕಾರಗಳ ಪ್ರಸ್ತಾವನೆಗಳು, ಸರ್ಕಾರಕ್ಕೆ ಭೂ ಮಾಲೀಕರು ಸಲ್ಲಿಸುವ ಮನವಿಗಳು ಅಥವಾ ಸಂಬಂಧಿತ ಸಚಿವರ

ಸಮ್ಮತಿ ಅಥವಾ ಆದೇಶದ ಮೇರೆಗೆ ರಾಜ್ಯ ಪತ್ರದಲ್ಲಿ ಅಧಿಸೂಚಿತ ಪ್ರಕರಣಗಳಲ್ಲಿ, ಸಂಬಂಧಿತ ಪ್ರಾಧಿಕಾರದ ವರದಿ ತರಿಸಿ ದಿನಾಂಕ : 20-12-2012 ರಂದು ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ : ಕಂ ಇ : 89 : ಭೂ ಸ್ವಾಹಾ 2012 ಕ್ಕೆ ಅನುಗುಣವಾಗಿ ಡಿ-ನೋಟಿಫಿಕೇಶನ್ ಮಾಡಲು ಕಾನೂನು ರೀತ್ಯಾ ಅವಕಾಶವಿದೆ.

ಆದರೆ, ಬಿ ಜೆ ಪುಟ್ಟಸ್ವಾಮಿ ಅವರು ಮಾಡಿರುವ ಡಿ-ನೋಟಿಫಿಕೇಶನ್ ಆರೋಪಕ್ಕೆ ಸಂಬಂಧಿಸಿದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದಾಗಲೀ ಅಥವಾ ನಗರಾಭಿವೃದ್ಧಿ ಇಲಾಖೆಯಿಂದಾಗಲೀ ತಮಗೆ ಯಾವುದೇ ಪ್ರಸ್ತಾವನೆಯೇ ಬಂದಿಲ್ಲ. ಹೀಗಿರುವಾಗ ಈ ಆರೋಪ ಕುರಿತು ಏನು ಹೇಳಲಿ ? ಚುನಾವಣೆಗಳು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ದುರುದ್ದೇಶಪೂರ್ವಕವಾಗಿ ತಮ್ಮ ತೇಜೋವಧೆ ಮಾಡಿ ರಾಜಕೀಯ ಲಾಭಗಳಿಕೆಗೆ ಮಾಡುತ್ತಿರುವ ಹುನ್ನಾರ ಎಂದೇ ತರ್ಕಿಸಬೇಕಲ್ಲವೇ ? ಎಂದು ಮುಖ್ಯಮಂತ್ರಿ ಪ್ರಶ್ನಿಸಿದರು.

**ಭೂಪಸಂದ್ರದ ಭೂ-ಸ್ವಾಧೀನ ಪ್ರಕರಣ**

ಅಂದು ಬೆಂಗಳೂರು ಹೊರ ವಲಯದಲ್ಲಿದ್ದ ಭೂಪಸಂದ್ರ ಗ್ರಾಮದ ಸರ್ವೆ ಸಂಖ್ಯೆ : 20 ಮತ್ತು 21 ಕ್ಕೆ ಸಂಬಂಧಿಸಿದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ದಿನಾಂಕ : 19-01-1978 ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸುವುದರೊಂದಿಗೆ ಭೂಪಸಂದ್ರದ ಭೂ-ಸ್ವಾಧೀನ ಪ್ರಕರಣಕ್ಕೆ ಚಾಲನೆ ದೊರೆಯಿತು. ಸಂಬಂಧಿತ ಜಮೀನನ್ನು ದಿನಾಂಕ : 24-10-1987 ರಂದು ಭೂಸ್ವಾಧೀನಪಡಿಸಿಕೊಳ್ಳಲಾಯಿತು. ಭೂ-ಸ್ವಾಧೀನ ಕಾಯಿದೆಯ ಪರಿಚ್ಛೇಧ 16(2) ಅನ್ವಯ ದಿನಾಂಕ 06-07-1988 ಮತ್ತು 03-11-1988 ರಂತೆ ಅಧಿಸೂಚನೆ ಹೊರಡಿಸಿ ಸಂಬಂಧಿತ ಸರ್ವೆ ಸಂಖ್ಯೆಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 32 ನಿವೇಶನಗಳನ್ನು ಹಂಚಿಕೆ ಮಾಡಿತ್ತು.

ನಂತರ, ದಿನಾಂಕ : 27-08-1992 ರಲ್ಲಿ ಭೂ-ಸ್ವಾಧೀನ ಕಾಯಿದೆಯ ಪರಿಚ್ಛೇಧ 48 ( 1 ) ರೀತ್ಯಾ ಸಂಬಂಧಿತ ಜಮೀನನ್ನು ರಾಜ್ಯ ಸರ್ಕಾರವು ಡಿ-ನೋಟಿಫೈ ಮಾಡಿತ್ತು. ನಿವೇಶನ ಹಂಚಿಕೆದಾರರು ತಮ್ಮ ರಿಟ್ ಅರ್ಜಿ ಸಂಖ್ಯೆ : 37719-23/96 ರೀತ್ಯಾ ಈ ಡಿ-ನೋಟಿಫಿಕೇಷನ್‌ನನ್ನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ಅರ್ಜಿಯನ್ನು ಪುರಸ್ಕರಿಸಿದ ಉಚ್ಚ ನ್ಯಾಯಾಲಯವು ಭೂ-ಸ್ವಾಧೀನ ಕಾಯಿದೆಯ ಪರಿಚ್ಛೇಧ 48 ( 1 ) ರ ರೀತ್ಯಾ ಹೊರಡಿಸಿದ್ದ ಅಧಿಸೂಚನೆಯನ್ನು ದಿನಾಂಕ : 23-09-1996 ರಂದು ರದ್ದುಪಡಿಸಿತು. ತಮ್ಮ ರಿಟ್ ಅರ್ಜಿ ಸಂಖ್ಯೆ : 679/2002 ಹಾಗೂ 680/2002 ಸಲ್ಲಿಸಿದ ಅಲ್ಲಿನ ಭೂ-ಮಾಲೀಕರು ನ್ಯಾಯಾಲಯದಲ್ಲಿ ಈ ತೀರ್ಪನ್ನು ಪ್ರಶ್ನಿಸಿದರು. ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ದಿನಾಂಕ : 26-03-2004 ರಂದು ಅರ್ಜಿಯನ್ನು ವಜಾಗೊಳಿಸಿ, ಏಕಪೀಠ ನೀಡಿದ್ದ ತೀರ್ಪನ್ನು ಎತ್ತಿಹಿಡಿಯಿತು.

ಮತ್ತೊಮ್ಮೆ ಭೂ ಮಾಲೀಕರು ರಿಟ್ ಅರ್ಜಿ ಸಂಖ್ಯೆ : 242/2004 ಮೂಲಕ ವಿಭಾಗೀಯ ಪೀಠದ ಮುಂದೆ ಮರು ಪರಿಶೀಲನಾ ಅರ್ಜಿಯನ್ನು ಸಲ್ಲಿಸಿದರು.

ಅರ್ಜಿದಾರರ ಮನವಿಯನ್ನು ದಿನಾಂಕ : 12–08–2005 ರಲ್ಲಿ ತಿರಸ್ಕರಿಸಿದ ಉಚ್ಚ ನ್ಯಾಯಾಲಯವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪರ್ಯಾಯ ನಿವೇಶನವನ್ನು ಪಡೆಯಲ್ಲೊಲ್ಲದ ನಿವೇಶನ ಹಂಚಿಕೆದಾರರ ಹಕ್ಕುಗಳಿಗೆ ಬಾಧಿತವಾಗದೆ ಪರಿಹಾರ ಪಡೆಯಲು ರಾಜ್ಯ ಸರ್ಕಾರದ ಮೊರೆ ಹೋಗಲು ಅರ್ಜಿದಾರರಿಗೆ ನಿರ್ಬಂಧವಿಲ್ಲ ಎಂದು ಹೇಳಿತು.

ಇದೇ ವೇಳೆ ಸಯದ್ ಬಾಸಿದ್ ಎಂಬುವವರು ಸಿವಿಲ್ ಅಪೀಲ್ ಸಂಖ್ಯೆ : 6220/09 ಮತ್ತು 6223/09 ಮೂಲಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪುಗಳನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದರು. ಸರ್ವೋಚ್ಚ ನ್ಯಾಯಾಲಯವು ಅರ್ಜಿದಾರರ ಮನವಿಯನ್ನು ದಿನಾಂಕ : 18–11–2015 ರಂದು ವಜಾಗೊಳಿಸಿತು.

ಮತ್ತೆ ಭೂ ಮಾಲೀಕರು ರಿಟ್ ಅರ್ಜಿ ಸಂಖ್ಯೆ : 53124–126/15 ಮೂಲಕ ದಿನಾಂಕ : 05–02–2016 ರಂದು ಉಚ್ಚ ನ್ಯಾಯಾಲಯದಲ್ಲಿ ಯೋಜನೆಯ ಕಾಲಾವಧಿ ವಿಳಂಬವಾಗಿರುವ ಹಿನ್ನೆಲೆಯಲ್ಲಿ ಅಂತಿಮ ಅಧಿಸೂಚನೆ ಊರ್ಜಿತವಲ್ಲ ಎಂದು ವಾದಿಸಿದ್ದರು. ಉಚ್ಚ ನ್ಯಾಯಾಲಯವು ಅರ್ಜಿದಾರರ ಈ ವಾದವನ್ನು ಪುರಸ್ಕರಿಸಿದ ನ್ಯಾಯಮೂರ್ತಿ ಆನಂದ ಬೈರಾರೆಡ್ಡಿ ಅವರ ಏಕ ಸದಸ್ಯ ಪೀಠವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯಿದೆಯ ಪರಿಚ್ಛೇಧದ 27 ರ ಅಡಿಯಲ್ಲಿ ಯೋಜನೆಯು ಸಕಾಲದಲ್ಲಿ ಹಾಗೂ ಕಾಲಾವಧಿಯೊಳಗೆ ಅನುಷ್ಠಾನಗೊಳ್ಳದ ಹಿನ್ನೆಲೆಯಲ್ಲಿ ವ್ಯರ್ಥವಾಗಿದೆ ಎಂದು ತೀರ್ಪು ನೀಡಿತು.

ತದ ನಂತರ ದಿನಾಂಕ : 05–12–2016 ರಲ್ಲಿ ರಿಟ್ ಅರ್ಜಿ ಸಂಖ್ಯೆ : 53124–126/2013 ರಲ್ಲಿ ನ್ಯಾಯಾಲಯದ ಏಕ ಸದಸ್ಯ ಪೀಠವು ದಿನಾಂಕ : 18–11–2015 ರಂದು ಈಗಾಗಲೇ ತೀರ್ಪನ್ನಿತ್ತಿರುವ ಹಿನ್ನೆಲೆಯಲ್ಲಿ ಹಾಗೂ ದಿನಾಂಕ : 07–06–2016 ರಂದು ಮನವಿಯನ್ನು ಹಿಂಪಡೆಯಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ : 548–549/2016 ಹಾಗೂ 1413/16 ವಜಾಗೊಳಿಸಿತು. ಏಕ ಸದಸ್ಯ ಪೀಠದ ಈ ತೀರ್ಪು ವಿರುದ್ಧ ನಿವೇಶನ ಹಂಚಿಕೆದಾರರಾದ ಡಿ ಕೆ ವಿ ಚಲಪತಿ ರೆಡ್ಡಿ ಮತ್ತೊಬ್ಬರು ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ : 550–551/16 ಹಾಗೂ 611/16 ಕೂಡಾ ವಜಾಗೊಂಡಿತು.

ಶಾಸಕ ವಸಂತ ಬಂಗೇರಾ ಅವರು ದಿನಾಂಕ : 10–12–2013 ಹಾಗೂ 07–05–2014 ರಲ್ಲಿ ಭೂಪಸಂದ್ರದ ಸರ್ವೆ ಸಂಖ್ಯೆ : 20 ರಲ್ಲಿನ ನಾಲ್ಕು ಕಂದಾಯ ನಿವೇಶನಗಳನ್ನು ಸಕ್ರಮಗೊಳಿಸುವಂತೆ ತಮಗೆ ಎರಡು ಬಾರಿ ಪತ್ರ ನೀಡಿದ್ದರು. ಮುಖ್ಯಮಂತ್ರಿಯಾಗಿ ಈ ಎರಡೂ ಪತ್ರಗಳಿಗೆ ಪರಿಶೀಲಿಸಿ – ಚರ್ಚಿಸಿ ಎಂದು ಷರಾ ಬರೆದಿದ್ದೇನೆ. ಈ ಷರಾ ಅಧಿಸೂಚನೆಯೂ ಅಲ್ಲ ! ಆದೇಶವೂ ಅಲ್ಲ !! ಮೊದಲ ಪತ್ರ ಸ್ವೀಕೃತವಾದೊಡನೆಯೇ

ಪತ್ರವನ್ನು ಸಮಗ್ರವಾಗಿ ಪರಿಶೀಲಿಸಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ದಿನಾಂಕ : 07-03-2014 ರಂದು ಮೇಲಿನ ಎಲ್ಲಾ ಅಂಶಗಳನ್ನು ಅನುಲಕ್ಷಿಸಿ ನಿವೇಶನಗಳನ್ನು ಸಕ್ರಮಗೊಳಿಸಲು ಸಾಧ್ಯವಾಗುವುದಿಲ್ಲ ಎಂದು ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರಿಗೆ ವರದಿ ಸಲ್ಲಿಸಿತ್ತು ಎಂದು ಮುಖ್ಯಮಂತ್ರಿ ಪತ್ರಿಕಾಗೋಷ್ಠಿಯಲ್ಲಿ ಸವಿವರ ಮಾಹಿತಿ ನೀಡಿದರು.

ಆದರೆ, ಒಂದೆಡೆ ಬಿ ಜೆ ಪಿ ( ಬಿ ಜೆ ಪುಟ್ಟಸ್ವಾಮಿ ) ಹಾಗೂ ಮತ್ತೊಂದೆಡೆ ಬಿ ಜೆ ಪಿ ( ಭಾರತೀಯ ಜನತಾ ಪಕ್ಷ ) ಈ ವಿಷಯವನ್ನು ಭೂ ಹಗರಣವಾದಂತೆ ತಪ್ಪು ಗ್ರಹಿಕೆ ಮೂಡಿಸಲು ಯತ್ನಿಸಿ ಸಾರ್ವಜನಿಕರನ್ನು ತಪ್ಪು ದಾರಿಗೆಳೆಯುವ ಹುನ್ನಾರ ನಡೆಸುತ್ತಿದೆ ಎಂದು ಸಿದ್ದರಾಮಯ್ಯ ಅವರು ಪ್ರತ್ಯಾರೋಪ ಮಾಡಿದರು.

ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವ ಕೆ ಜೆ ಜಾರ್ಜ್, ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮಹೇಂದ್ರ ಜೈನ್, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಾಕೇಶ್ ಸಿಂಗ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎಲ್ ಕೆ ಅತೀಕ್ ಅವರೂ ಸೇರಿದಂತೆ ಹಿರಿಯ ಅಧಿಕಾರಿಗಳು ಪತ್ರಿಕಾ ಗೋಷ್ಠಿಯಲ್ಲಿ ಹಾಜರಿದ್ದರು.

************

ಡಿ ಪಿ ಎಂ